ಚಾಚಿದಳು. ಅವಳ ನೂಪುರ ಘಲ್ಲು ಘಲ್ಲೆನಲು ಹಂಸವು ಅತ್ತಲಿತ್ತ ಸರಿದಾಡುತ್ತ ಒಂದೆಡೆ ನಿಲ್ಲದೆ ಓಡಾಡಿತು. ಅವಳ ಅಂಗೈ ಹತ್ತಿರ ಬಂದಂತೆ ಬಂದು ಕೈಗೆ ಸಿಗದೆ ಅಡ್ಡಾಡಿಸಿತು. ಹೂ ತುಂಬಿದ ನವ ಮಲ್ಲಿಗೆಯ ಬಸಕ್ಕೆ ನುಗ್ಗಿ ಅದರ ಪೊದರಿನಲ್ಲಿ ಹೊಕ್ಕಿತು.

ದಮಯಂತಿಯು ತನ್ನ ಗೆಳತಿಯರನ್ನು ಪಕ್ಕಕ್ಕೆ ಸರಿಸಿ ತಾನೇ ಮೆಳೆಯನ್ನು ಹೊಕ್ಕಳು. ಅಲ್ಲಿ ಕುಲುಕುತ್ತ ನಡೆವ ಹಂಸವನ್ನು ಹಿಡಿಯಲು ಬಗ್ಗಿದಾಗ ತೆಳು ನಡು ಬಳುಕಿತು. ಸ್ತನ ಭಾರದಿಂದ ಮೇಲ್ಸೆರಗು ಜಾರಿತು. ಮುಡಿಗೂದಲು ಚದುರಿತು. ಜಲಜಮುಖಿಯಾದ ಅವಳು ಬೆವರಿ ಹೋದಳು. ಕೊರಳಿನ ಏಕಾವಳಿ ಸರವು ಅಲ್ಲಾಡಲು, ಸೆರಗನ್ನು ಸರಿಪಡಿಸಿಕೊಂಡಳು. ಬಳಲಿ ನಿಟ್ಟುಸಿರು ಬಿಡುತ್ತ ನಿಂತಳು. ಆಗ ಅವಳನ್ನು ನೋಡುತ್ತ ಹಂಸವು.

'ಎಲೆ ಸರೋಜ ಮುಖಿಯೇ, ನೀನು ನನಗಾಗಿ ಆಸೆಪಟ್ಟು, ಹಿಡಿವೆನೆಂಬ ಛಲದಿಂದಿರುವೆ. ಅದನ್ನು ಬಿಡು. ನಾವು ಅಂಬರದ ಪಕ್ಷಿಗಳು. ನಾವು ಯಾರಿಗೂ ಸಿಗುವವರಲ್ಲ.'

'ಆದರೆ ನನಗೆ ನಿನ್ನನ್ನು ಹಿಡಿದು ಮುದ್ದಾಡುವ ಆಸೆ.'

'ಚೆಲುವೆ ಬರಿದೆ ಏಕೆ ಬಳಲುವೆ? ನಾನು ಬಂದಿರುವ ಕಾರಣವನ್ನು ತಿಳಿಸುವೆ, ಕೇಳು.'

'ನೀನು ಅಚ್ಚ ಬಿಳಿಯ ಶುಭ. ಬಂದ ಹಿತದ ಕಾರಣ ಹೇಳು.'

## ನಿನ್ನ ರೂಪಿಗೆ ಸಲುವುದೌ ನಳನುನ್ನತದ ಸೌಂದರ್ಯ

'ನಾನು ನಳ ಚಕ್ರವರ್ತಿಯ ಬಳಿ ವಾಹನವಾಗಿದ್ದೇನೆ. ಅವನು ನನ್ನನ್ನು ಪ್ರೀತಿಯಿಂದ ಮುದ್ದು ಮಾಡಿ ಸಲಹುತ್ತಾನೆ. ಈ ಭೂಲೋಕದ ನಳಕೂಬರ, ಜಯಂತರ ಚೆಲುವನ್ನು, ಮದನನ ರೂಪ ಸೌಂದರ್ಯವನ್ನು ಮೀರುವ ಅತಿಶಯ ಸ್ಫುರದ್ರೂಪಿ ನನ್ನೊಡೆಯ' ಎಂದು ಹೇಳಿ ಕುಲು ಕುಲು ಕುಪ್ಪಳಿಸಿ ಹರ್ಷದ ಕಣ್ಣನ್ನು ಝಳಪಿಸಿ ಮಾತು ಮುಂದುವರೆಸಿತು– 'ಅವನ ಅನುಪಮ ಸೌಂದರ್ಯ ನಿನ್ನ ರೂಪಿಗೆ ಸರಿಯಾಗಿ ಹೊಂದುತ್ತದೆ. ಜಗತ್ತಿನಲ್ಲಿ ನಿಮ್ಮ ಜೋಡಿಗೆ ಸರಿಸಮನಾದವರನ್ನು ನಾನು ಕಾಣೆ.'

ಆ ನುಡಿ ಕೇಳಿ ಗುಣ ಸಂಪನ್ನೆಯಾದ ದಮಯಂತಿ ನಾಚಿದಳು. ನಸು ನಗುತ್ತ ವಿನಯದಿಂದ ನುಡಿದಳು:

'ಪರಮ ಗುಣನಿಧಿ ಪಕ್ಷಿಯೇ ಕೇಳು. ಪಾಪಿಯೂ ಬಹಿಷ್ಕೃತನೂ ಆದ ಮನ್ಮಥನು ನನ್ನ ಮೇಲೆ ಪುಷ್ಪ ಬಾಣಗಳನ್ನೆಸೆದು ನನ್ನೀ ಒಡಲನ್ನು ಆಯಾಸಗೊಳಿಸಿದನು. ನನಗುಂಟಾಗಿರುವ ವಿರಹ ತಾಪವನ್ನು ತನ್ನ ಕರುಣಾರಸದಿಂದ ಶಾಂತವಾಗಿಸಬೇಕೆಂದು ನೀನು ನಳಮಹಾರಾಜನಿಗೆ ಬಿನ್ನವಿಸು.

'ಬೇರೆಯವರ ದುಃಖವನ್ನು ಪರಿಹರಿಸಿ ಉಪಕಾರ ಮಾಡಿದರೆ ಪುಣ್ಯ ಪ್ರಾಪ್ತಿಯಾಗುವುದೆಂದು ಹಿರಿಯರು ಹೇಳುತ್ತಾರೆ. ಹಂಸರಾಜನೇ, ನೀನೇ ನನಗೆ ಉತ್ತಮ ಬಂಧು. ಸಹಾಯ ಮಾಡು. ವಿರಹದಿಂದ ನೊಂದಿರುವವಳನ್ನು ದುಃಖಕ್ಕೀಡಾಗುವಂತೆ ಮಾಡಬೇಡ, ರಕ್ಷಿಸು' ಎಂದು ಕೇಳಿಕೊಳ್ಳುತ್ತ ವಿರಹದ ನೋವು ನಾಚಿಕೆಗಳಿಂದ ತಲೆತಗ್ಗಿಸಿ ಮಾತು ಮುಂದುವರಿಸಿದಳು 'ವಿರಹಾಗ್ನಿಯಲ್ಲಿ ನೊಂದಿದ್ದೇನೆ. ಆ ತಾಪದಿಂದ ಶರೀರ ಬಾಡಿ ನಲಿವು ಇಂಗಿ ಹೋಗಿದೆ. ಶಕ್ತಿ ಕುಂದಿದೆ. ಹೆಚ್ಚು ಮಾತೇಕೆ? ನಳನೃಪ ತಿಲಕನೇ ನನ್ನ ಪತಿ. ಭೂಲೋಕದ ಇನ್ನಿತರ ಗಂಡಸರೆಲ್ಲ ನನಗೆ ಪಿತೃಸಮಾನರು.'

ದಮಯಂತಿಯ ಆ ನುಡಿಯೊಳಗಣ ಕರುಣ ಪ್ರಮಾಣವನ್ನು ಕಂಡು ಹಂಸವು– ತಾನು ಬಂದಿರುವ ಕಾರ್ಯ ಸಫಲವಾಯಿತೆಂದು ಹರ್ಷಗೊಂಡಿತು. ಅವಳನ್ನು ಹತ್ತಿರ ಕರೆದು ಆತ್ಮೀಯ ಭಾವದಲ್ಲಿ ಕೊಂಡಾಡುತ್ತ 'ಹೆದರಬೇಡ. ನಿನಗೆ ನಳಮಹಾರಾಜನನ್ನು ಪತಿಯನ್ನಾಗಿ ಮಾಡುತ್ತೇನೆ' ಎಂದು ಹೇಳಿತು. ಅವಳಿಗೆ ಅಂತರಂಗದ ಹಲವು ವಿಷಯಗಳನ್ನು ಹೇಳಿ ಸಮಾಧಾನಪಡಿಸಿತು. ಅವಳಿಂದ ಬೀಳ್ಕೊಂಡು ಬೇಗ ಬೇಗ ಮುಂದೆ ಸಾಗಿ ತನ್ನ ಬಳಗವನ್ನು ಕೂಡಿಕೊಂಡಿತು. ನಳನ ಚಿಂತೆಯನ್ನು ಪರಿಹರಿಸಲು ಹಿಂತಿರುಗಿ ಬಂದಿತು.

## ಭೋಗ ಸುಖದರ್ಶನದ ಫಲವಿಂದೀಗಲಹುದು

ಆಗ ನಳ ಭೂವರನ ಬಲಭಾಗ ಬಲಭುಜ ಮತ್ತು ಬಲಗಣ್ಣು ಅದುರಿದವು. ಅದರ ಫಲವೇನೆಂದು ಬ್ರಾಹ್ಮಣರನ್ನು ಕರೆದು ಕೇಳಿದನು. ಅವರು 'ಇದು ಶುಭ ಸೂಚನೆ. ರತಿ ಸುಖದ ದರ್ಶನ ಫಲವಿದು' ಎಂದು ಹೇಳುವ ಸಮಯಕ್ಕೆ ರಾಜಹಂಸವು ಪ್ರೀತಿಯಿಂದ ರಾಜನ ಬಳಿಗೆ ಬಂದಿತು. ಅದನ್ನು ನೋಡುತ್ತ ಅದರ ಮುಖ ಕಳೆಯಿಂದಲೇ ನಳನು ದಮಯಂತಿ ತನ್ನನ್ನು ಮೆಚ್ಚಿರಬೇಕೆಂದು ಮನಸ್ಸಿನಲ್ಲಿ ಊಹಿಸಿಕೊಂಡನು. ಪ್ರಕಟವಾಗಿ ಸಂತೋಷದಿಂದ ಹಂಸೆಯನ್ನು ಕೇಳಿದನು,

'ಹಂಸರಾಜನೇ, ಮಂದಗಮನೆ ದಮಯಂತಿಯನ್ನು ನೋಡಿದೆಯಾ? ಏನೆಂದು ಹೇಳಿದಳು? ಅವಳ ಮನದ ಒಳ ಭಾವವೇನು?'

'ಮಹಾರಾಜನೇ ಕೇಳು. ಮನಸ್ಸಿನ ಅನುಮಾನವನ್ನು ಬಿಡು. ನಿನ್ನ ಇಷ್ಟಾರ್ಥ ಸಿದ್ಧಿಸಿರುವುದರಿಂದ ಗುಡಿಯ ಕಟ್ಟಿಸು. ಮಾನನಿಧಿಯೇ, ನೀನು ಈ ಹಿಂದೆ ಮಾಡಿದ ಪುಣ್ಯ ಫಲವೋ ಎಂಬಂತೆ ದಮಯಂತಿಯು ಸದಾ ನಿನ್ನನ್ನೇ ನೆನೆಯುತ್ತಿರುತ್ತಾಳೆ. ಅವಳಿಗೆ ಬೇರೆ ಯಾವುದರಲ್ಲೂ ಮನಸ್ಸಿಲ್ಲ.'

'ಹೌದೇ!'

'ಹೌದು ಮಹಾರಾಜ. ಆ ಸುಂದರಿಯು ನಿನ್ನ ಮೇಲಿನ ಪ್ರೀತಿಯಿಂದ ಒಲಿದು, ಅಂತರಂಗದಲ್ಲಿ ನಿನಗಾಗಿ ಕಾತರಿಸುತ್ತಿದ್ದಾಳೆ. ಮನ್ಮಥನ ಉಪಟಳದಿಂದ ಕಡು ನೊಂದಿದ್ದಾಳೆ, ಶಕ್ತಿಗುಂದಿದ್ದಾಳೆ. ಆ ತರುಣಿ ನಿನ್ನನ್ನೇ ಹಂಬಲಿಸುತ್ತ– ನಳನೃಪನೇ ತನ್ನ ಪತಿಯೆಂದು ನಂಬಿದ್ದಾಳೆ' ಎಂದು ಹೇಳುತ್ತ ದಮಯಂತಿಯ ಪ್ರೀತಿಯ ವಿರಹ ವದನವನ್ನು ನೆನೆದು ಮಾತು ಮುಂದುವರಿಸಿತು 'ನೃಪತಿಯೆ, ದಮಯಂತಿಯು ನಿನಗೆ ಪತ್ನಿಯಾಗುವಂತೆ ಒಲಿಸಿ ಬಂದಿದ್ದೇನೆ. ನಾನು ಕೊಟ್ಟ ಭಾಷೆ ನೆರವೇರಿತು. ನೀನು ಆ ಲಲನೆಯನ್ನು ಮದುವೆಯಾಗು. ನನ್ನನ್ನು ಹೊರಡಲು ಅನುಮತಿಸು.'

'ಹಂಸರಾಜ ತಾವು ನನಗಾಗಿ ತುಂಬಾ ಬಳಲಿದಿರಿ. ಕಾಡಿನಲ್ಲಿ ಅಲೆದಾಡಿದಿರಿ. ಕಷ್ಟಕ್ಕೆ ಗುರಿಯಾದಿರಿ. ತಮ್ಮ ಸೇವೆ ಅಪಾರವಾದುದು. ತಾವು ಹೊರಡಿ' ಎಂದು ಹೇಳಿ ತುಂಬು ಪ್ರೀತಿ, ಗೌರವ, ಅಭಿಮಾನದಿಂದ ಬೀಳ್ಕೊಟ್ಟನು.

## ಚಿತ್ತಜನು ಪಾತಕನು ವಿರಹದ ಹೊತ್ತಿಸಿದನಿಬ್ಬರಿಗೆ

ಪಾಂಡವತನಯನೇ ಕೇಳು. ರಾಜಹಂಸವು ತನ್ನ ಬಳಗದತ್ತ ಸಾಗಲು ಇತ್ತ ನಳನು ತನ್ನ ವಿದರ್ಭನಗರಕ್ಕೆ ಹಿಂತಿರುಗಿದನು. ಅವನ ಮನಸ್ಸಿನಲ್ಲಿ ವಿರಹ ತಾಪ ಹೆಚ್ಚಲು ಪರಿಚಾರಕರನ್ನು ದೂರ ಕಳುಹಿಸಿದನು. ಆಟ ಕೂಟ, ವಿನೋದ ವೈಭವಗಳಿಂದ ದೂರವಾದನು.

ಆ ಕಡೆ ದಮಯಂತಿ ನಳನ ಯೋಚನೆಯಲ್ಲಿಯೇ ಇದ್ದಳು. ನಳನಿಗೆ ವಿರಹದ ಉರಿ ಹೊತ್ತಿತ್ತು. ಈರ್ವರಿಗೂ ವಿರಹ ಸಂತಾಪವನ್ನುಂಟು ಮಾಡಿದ ಮದನನು ನಿಜವಾಗಿಯೂ ಪಾತಕನು! ಆದರೆ ಆ ಕಾಮನ ತಂದೆ ಚೆನ್ನಿಗರಾಯ ಶ್ರೀಹರಿಯು ಅವರಿಬ್ಬರಿಗೂ ಕರುಣೆ ತೋರಿದ!

## ದಮಯಂತಿ ಸ್ವಯಂವರ

ಧರ್ಮರಾಜನೇ ಕೇಳು. ನಳನ ರೂಪ ಸೌಂದರ್ಯವನ್ನು ಕೇಳಿಯೇ ದಮಯಂತಿಗೆ ಹೀಗಾಯಿತು. ಇನ್ನು ಅವನ ಲಾವಣ್ಯಯುಕ್ತ ಅಂಗಾಂಗದ ಶರೀರವನ್ನು ನೋಡಲು ಅವಳ ವಿರಹ ತಾಪ ಏನಾಗುವುದೊ! ನಾಲಗೆ ಒಣಗಿ, ಮಂಚದ ಮೇಲೆ ಮಲಗುವುದನ್ನು ಬಿಟ್ಟಳು. ಅವಳ ವಿರಹಾವಸ್ಥೆಯ ಮನೋವ್ಯಥೆಯನ್ನು ಏನೆಂದು ವರ್ಣಿಸಲಿ ಧರ್ಮಜ ಎಂದು ರೋಮಶಮುನಿ ನೊಂದು ನುಡಿಯುತ್ತ ಕಥೆ ಮುಂದುವರಿಸಿದರು.

ಲಲನೆಗೆ ನಿದ್ರೆ ಬಾರದಾಯಿತು. ಮನಸ್ಸು ದಿಗ್ಭ್ರಮೆಗೊಂಡಿತು. ತನ್ನ ಸಖಿಯರು ಹತ್ತಿರ ಸುಳಿದಾಡಲು– ನಳನೃಪನು ಬಂದನೆಂದು ಇಣಿಕಿ

### ನೆರಳು

ಬೆಟ್ಟದ ಮೇಲೆ ಏರುವಾಗ
ಕಾಲ್ಜಾರಿ ಬಿತ್ತು
ನನ್ನ ನೆರಳು

-ವಿ. ಪುಗಳೇಂದಿ

